ಅಂದರೇನು, ಅವಳ ಪ್ರೀತಿಗೆ ಹೇಗಿರುತ್ತದೆ ಅಂತ ಗೊತ್ತಿರಲಿಲ್ಲ. ಸಂಬಂಧದ ಸೂಕ್ಷ್ಮ ಸ್ಪಂದನ ಉಂಟಾಗದ ರೀತಿಯಲ್ಲಿ ರುದ್ರನಾಗ ಅವಳನ್ನು ಬೆಳೆಸಿದ್ದ. ಅದರ ಪರಿಣಾಮವೇ ಇದು. ಅರುಂಧತಿ ಉದ್ವೇಗ, ಆತುರದಿಂದ ಕೂಗುತ್ತಿದ್ದರೂ ಸಹ ಹಿಂದಿರುಗಿ ನೋಡದೆ ಮನೆಯತ್ತ ಓಡುತ್ತಿದ್ದಾಳೆ. ಮಾಂತ್ರಿಕ ರುದ್ರನಾಗನ ಮನೆ. ರಾತ್ರಿ ಎಂಟು ಗಂಟೆಯ ಸಮಯ. ರುದ್ರನಾಗ ಊಟ ಮಾಡುತ್ತಾ ಮಲ್ಲಿಗೆಗೆ ಏನು ಮಾಡಬೇಕು ಎಂದು ಹೇಳುತ್ತಿದ್ದಾನೆ. ಅವಳು ತಲೆಯಾಡಿಸುತ್ತಿದ್ದಾಳೆ. ರುದ್ರನಾಗ ಊಟ ಮಾಡಿದ ನಂತರ ರೂಮಿಗೆ ಬಂದ. ಅಲ್ಲಿ ರಹಸ್ಯವಾಗಿ ಇರಿಸಿದ್ದ ಬ್ಯಾಗನ್ನು ತೆರೆದ.

ಅದು ಅರುಂಧತಿಯ ವ್ಯಾನಿಟಿ ಬ್ಯಾಗ್. ಹಿಂದೆ ಯಾವಾಗಲೋ ಒಂದು ಸಲ ತವರು ಮನೆಗೆ ಬಂದಿದ್ದಾಗ ಈ ಬ್ಯಾಗನ್ನು ಅಲ್ಲಿಯೇ ಮರೆತಿದ್ದಳು. ಅದರಲ್ಲಿ ಬಾಚಣಿಗೆ ಇತ್ತು. ತಲೆ ಬಾಚಿಕೊಂಡ ನಂತರ ಕ್ಲೀನ್ ಮಾಡದೆ ಮರೆತು ಬಾಚಣಿಗೆಯನ್ನು ವ್ಯಾನಿಟಿ ಬ್ಯಾಗ್‌ನಲ್ಲಿ ಹಾಕಿದ್ದಳು. ಅದರಲ್ಲಿ ಅವಳ ತಲೆಯ ಕೂದಲುಗಳಿತ್ತು. ರುದ್ರನಾಗ ಈಗ ಅರುಂಧತಿಯ ತಲೆಯ ಕೂದಲುಗಳನ್ನು ತೆಗೆದುಕೊಡುತ್ತಾ 'ಇದನ್ನು ಯಾವ ರೀತಿ ಉಪಯೋಗಿಸಬೇಕು ಅಂತ ಗೊತ್ತಿದೆ ತಾನೆ?'

ಮಲ್ಲಿಗೆ 'ಗೊತ್ತಿದೆ'

'ಹೇಳಿದ್ದೆಲ್ಲಾ ನೆನಪಿದೆ ತಾನೆ' ಎಂದಾಗ ತಲೆಯಾಡಿಸಿದಳು.

ರುದ್ರನಾಗ 'ನೀನು ಹತ್ತು ಗಂಟೆಯ ನಂತರ ಊಟ ಮಾಡಿ ಹೊರಡು. ನಾನು ಒಂದು ರೌಂಡ್ ಸುತ್ತಿಕೊಂಡು ಬರುತ್ತೇನೆ' ಎಂದು ಮನೆಯಿಂದ ಹೊರಗೆ ಬಂದ.

ಆಗ ರಾತ್ರಿ ಎಂಟೂಕಾಲು ಗಂಟೆ. ಮಲ್ಲಿಗೆ ಈಗ ಮುಂಬಾಗಿಲನ್ನು ಹಾಕಿಕೊಂಡು ದೀಪ ಆರಿಸಿ ಕುಳಿತುಕೊಂಡಳು. ಕತ್ತಲಲ್ಲಿ ಗೋಡೆಗೆ ಒರಗಿಕೊಂಡು ಪಿಳಿಪಿಳಿ ಕಣ್ಣು ಬಿಡುತ್ತಾ ಕುಳಿತುಕೊಂಡಿದ್ದಾಳೆ. ಅವಳು ಯಾವುದರ ಬಗ್ಗೆಯೂ ಸಹ ಆಲೋಚಿಸುವುದಿಲ್ಲ. ಮಂಕಾಗಿ ಕುಳಿತಿರುತ್ತಾಳೆ. ಒಂದೇ ಒಂದು ಸಲ ಅವಳಿಗೆ ತನ್ನ ತಾಯಿಯ ನೆನಪಾಯಿತು. ತಾನು ತಾಯಿಯಂತೆ ಇದ್ದೇನೆ ಅಷ್ಟೇ. ಮತ್ತೊಂದು ಕ್ಷಣದಲ್ಲಿ ತಾಯಿಯ ರೂಪ ಮರೆಯಾಯಿತು.

ಮನಸ್ಸು ಶೂನ್ಯವಾಗಿದೆ. ಸಮಯ ಉರುಳುತ್ತಿತ್ತು. ಗೋಡೆಯ ಮೇಲೆ ಇದ್ದ ಗಡಿಯಾರ ಢಣ್... ಢಣ್ ಎಂದು ಹತ್ತು ಸಲ ಶಬ್ದ ಮಾಡಿತು. ಅವಳಿಗೆ ಓದಲು, ಬರೆಯಲು ಬರುತ್ತಿರಲಿಲ್ಲ. ಸ್ಮಶಾನದ ಕೆಲಸಕ್ಕೆ ವೇಳೆಯಾಗುತ್ತದೆ ಎಂದು ಅಡುಗೆಯ ಕೋಣೆಗೆ ಬಂದಳು. ರಾತ್ರಿಯೆಲ್ಲಾ ಮಂತ್ರ ಹೇಳುತ್ತಾ ಕಠಿಣ ಸಾಧನೆ ಮಾಡಬೇಕಾಗಿರುವುದರಿಂದ ಹೊಟ್ಟೆ ತುಂಬಾ ಊಟ ಮಾಡಿ ಹೊರಟಳು. ಆಗ ರಾತ್ರಿ ಹತ್ತೂವರೆ.

* * *

ರಾತ್ರಿ ಎಂಟೂವರೆಯ ಸಮಯದಲ್ಲಿ ಮದಂತ ಸ್ಮಶಾನದಲ್ಲಿದ್ದ. ತನ್ನ ಗುರು ಮಾಂತ್ರಿಕನ ಕಾರ್ಯಶೀಲತೆಯನ್ನು ತಡೆಯಲು ಅಂಗಕ್ಷೀಣ ಪ್ರಯೋಗ ಪ್ರಾರಂಭಿಸಿದ. ಅದರಿಂದ ಸಾವು ಬರುವುದಿಲ್ಲ. ಅಗ್ನಿಕುಂಡ ಉರಿಯುತ್ತಿದೆ. ಮದಂತ ಅಲ್ಲಿ ನಿಂತಿದ್ದಾನೆ.

ರುದ್ರನಾಗ ಹೆಜ್ಜೆ ಊರಿದ್ದ ಮಣ್ಣಿನಿಂದ ಈಗ ಗೊಂಬೆಯನ್ನು ಮಾಡಿದ್ದಾನೆ. ಕ್ಷುದ್ರಶಕ್ತಿಗಳಿಗೆ ರಕ್ತತರ್ಪಣ ನೀಡಿದ ನಂತರ ಗೊಂಬೆಯನ್ನು ಎತ್ತಿಕೊಂಡ. ತುಂಬಾ ಸರಳ ಪ್ರಯೋಗ. ಮದಂತನ ಅಂಗೈ ಮೇಲೆ ಗೊಂಬೆ ಇದೆ. ಅದರ ಕಾಲನ್ನು ಹಿಡಿದು ಎಳೆದ. ನಂತರ ಎರಡು ಕೈಗಳು. ಕೊನೆಯಲ್ಲಿ ನಾಲಿಗೆ. ಆದರೆ ಕಣ್ಣುಗಳ ತಂಟೆಗೆ ಹೋಗಲಿಲ್ಲ.

* * *

## ಮುಗ್ಗರಿಸಿ ಬಿದ್ದ ರುದ್ರನಾಗ

ರಾತ್ರಿ ಒಂಭತ್ತೂವರೆಯ ಸಮಯ. ಈಗ ರುದ್ರನಾಗ ಮನೆಯತ್ತ ಬರುತ್ತಿದ್ದಾನೆ. ಊಟವಾದ ನಂತರ ಗಾಳಿಯಲ್ಲಿ ಒಂದು ಗಂಟೆ ತಿರುಗಾಡುತ್ತಾನೆ ಅವನು. ಇಲ್ಲ... ನಡೆಯಲಾಗುತ್ತಿಲ್ಲ. ದೇಹವೆಲ್ಲಾ ಬೆವರುತ್ತಿದೆ. ಅದು ಮಾವಿನ ತೋಪು. ಮಾವಿನ ಮರಗಳು ಇವನ ಕಣ್ಣುಗಳ ಮುಂದೆ ಕುಣಿಯುತ್ತಿರುವಂತೆ ಕಾಣುತ್ತಿದೆ. ಯಮಯಾತನೆಯ ಉಂಟಾಗಿದ್ದರಿಂದ ದಬಾರನೆ ಮುಗ್ಗರಿಸಿ ಬಿದ್ದ. ಕೈಕಾಲುಗಳನ್ನು ಅಲ್ಲಾಡಿಸಲು ಆಗುತ್ತಿಲ್ಲ. ನಾಲಿಗೆ ಕತ್ತರಿಸಿದಂತೆ ಆಗುತ್ತಿದೆ. ನೋವು... ಉರಿ... ಸಂಕಟ. ಕಂಬನಿ ಜಾರುತ್ತಿದೆ. ನೆಲದ ಮೇಲೆ ಬಿದ್ದವನು ಈಗ ನೀರಿನಿಂದ ಹೊರತೆಗೆದ ಮೀನಿನಂತೆ ಒದ್ದಾಡುತ್ತಿದ್ದಾನೆ.

ರುದ್ರನಾಗನಿಗೆ ಗೊತ್ತಾಗಿ ಹೋಯಿತು. ತನ್ನ ಮೇಲೆ ಪ್ರಯೋಗ ನಡೆದಿದೆ ಎಂದು. ಆದರೆ ಅವನಿಗೆ ಅಂಥ ಸಮಯದಲ್ಲಿಯೂ ಸಹ ಗೊಂದಲ ಉಂಟಾಗುತ್ತಿದೆ.

ನನ್ನ ಮೇಲೆ ಅಂಗಕ್ಷೀಣ ವಿದ್ಯೆ ಪ್ರಯೋಗ ಮಾಡಿಲ್ಲ. ಬೇರೆ ಏನೋ ಆಗಿರಬೇಕು. ಮದಂತ ನೆನಪಾದನು. ಅವನೇ ಈ ಕೆಲಸ ಮಾಡಿದ್ದಾನೆ. ನನ್ನಿಂದ ವಿದ್ಯೆ ಕಲಿತಿರುವ ಮದಂತ ನನಗೇ ತಿರುಗೇಟು ಕೊಡುತ್ತಾನೆ ಅಂದುಕೊಂಡಿರಲಿಲ್ಲ ನಾನು.

ಅಬ್ಬಾ... ಸಂಕಟ ಜಾಸ್ತಿಯಾಗಿದೆ. ಅಯ್ಯೋ... ಅಯ್ಯೋ ನನಗೇನಾಗುತ್ತಿದೆ. ಕರುಳು ಹಿಂಡಿದಂತೆ ಆಗುತ್ತಿದೆ. ನೂರು ಸೂಜಿಗಳಿಂದ ಚುಚ್ಚಿದಂತೆ ಆಗುತ್ತಿದೆ. ರಕ್ತ ವಾಂತಿಯಾಯಿತು. ರುದ್ರನಾಗ ಅಂದುಕೊಂಡ. ಮುಗಿಯಿತು. ನನ್ನ ಬದುಕು ಮುಗಿಯಿತು.

ಆಗ ಕೇಳಿಸಿತು ನಿಶ್ಯಬ್ದತೆಯನ್ನು ಸೀಳಿಕೊಂಡು ಬಂದ ಕೂಗು. ಅರುಂಧತಿಯ ಧ್ವನಿ. ಅವಳ ಜೊತೆ ಸುರೇಂದ್ರ ಸಹ ಇದ್ದಾನೆ. ಈ ಊರಿನಲ್ಲಿ ನಡೆಯುತ್ತಿರುವ ಭಯಾನಕ ಘಟನೆಗಳಿಂದ ತತ್ತರಿಸಿ ಹೋಗುತ್ತಿದ್ದಾನೆ.

ರುದ್ರನಾಗ ಕತ್ತನ್ನು ಹೊರಳಿಸಿದ. ಕಂಬನಿ ಮಿಡಿಯುತ್ತಿರುವ ತಂಗಿ. ತಾನು ಯಾರ ಸಂಸಾರವನ್ನು ಸರ್ವನಾಶ ಮಾಡುತ್ತಿದ್ದನೋ ಅಂಥವಳು ನನ್ನ ಪರಿಸ್ಥಿತಿ ಕಂಡು ಅಳುತ್ತಿದ್ದಾಳೆ.

ಅರುಂಧತಿ ಈಗ ತನ್ನ ಅಣ್ಣನ ತಲೆಯನ್ನು ತೊಡೆಯ ಮೇಲೆ ಇರಿಸಿಕೊಂಡಳು. ಅವಳ ಕಣ್ಣುಗಳಿಂದ ಉದುರುತ್ತಿರುವ ಕಂಬನಿ ರುದ್ರನಾಗನ ಮುಖದ ಮೇಲೆ ಬೀಳುತ್ತಿದೆ. ರುದ್ರನಾಗ ಕದಲಿದ. ಗಂಡನನ್ನು ಕೊಂದು... ಎರಡು ಹೆಣ್ಣು ಮಕ್ಕಳ ಬಾಳನ್ನು ಬಲಿ ತೆಗೆದುಕೊಂಡಿರುವ ನನ್ನ ಬಗ್ಗೆ ಇವಳು ಅನುಕಂಪದ ಕಂಬನಿ ಮಿಡಿಯುತ್ತಿದ್ದಾಳೆ.

ಇವಳು ನನ್ನ ತಂಗಿ. ಆದರೆ ಇವಳ ಅಣ್ಣನಾದ ನಾನು... ನಾನು ಇಪ್ಪತ್ತು ವರ್ಷಗಳಿಂದ ಅರ್ಥವಿಲ್ಲದ ಸೇಡನ್ನು ತುಂಬಿಕೊಂಡು ರಾಕ್ಷಸನಂತೆ ವರ್ತಿಸಿದೆ. ರುದ್ರನಾಗ ಪಶ್ಚಾತ್ತಾಪ ಪಡುತ್ತಿದ್ದಾನೆ. ತಂಗಿಗೆ ಏನನ್ನೋ ಹೇಳಲು ಪ್ರಯತ್ನಿಸುತ್ತಿದ್ದಾನೆ. ಆದರೆ ನಾಲಿಗೆ ಹೊರಳುತ್ತಿಲ್ಲ. ಪುನಃ ರಕ್ತವಾಂತಿಯಾಯಿತು. ನಿನ್ನ ಮಗಳು ನಿನ್ನ ವಿರುದ್ಧ ಸಾವಿನ ಪ್ರಯೋಗ ಮಾಡುತ್ತಿದ್ದಾಳೆ. ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗು. ನಾನು ಹೇಳಿದರೆ ಮಾಂತ್ರಿಕ ಪ್ರಯೋಗ ನಿಲ್ಲಿಸುತ್ತಾಳೆ. ನಂತರ ನಿನ್ನ ಮಗಳನ್ನು ನೀನು ಕರೆದುಕೊಂಡು ಹೋಗು ಎಂದು ಹೇಳುವ ಆತುರ. ಶಬ್ದಗಳು ಹೊರಬರುತ್ತಿಲ್ಲ. ಸಂಕಟ ಪಡುತ್ತಿದ್ದಾನೆ. ಕಣ್ಣುಗಳಿಂದ ಪಶ್ಚಾತ್ತಾಪದ ಕಂಬನಿ ಬರುತ್ತಿದೆ. ಅರ್ಥ ಮಾಡಿಕೊಂಡಳು ಅರುಂಧತಿ. ಆ ಕ್ಷಣದಲ್ಲಿ ತನ್ನ ರಾಕ್ಷಸ ಅಣ್ಣನನ್ನು ಕ್ಷಮಿಸಿದ್ದಳು. ರುದ್ರನಾಗ ಕತ್ತನ್ನು ವಾಲಿಸಿದನು.

ಸೆರಗನ್ನು ಬಾಯಿಗೆ ತುರುಕಿಕೊಂಡು ಮುಸಿ ಮುಸಿ ಅಳುತ್ತಿರುವಾಗ ಸುರೇಂದ್ರ ಕೋಪದಿಂದ 'ನೀವು ಇವನಿಗಾಗಿ ಅಳಬೇಡಿ.'

ಅವಳು ಸುರೇಂದ್ರನ ಕಡೆ ನೋಡಿದಳು. ಅವನು ಕೋಪ, ಆವೇಶದಿಂದ 'ನನಗೆ ಎಲ್ಲಾ ತಿಳಿಯಿತು. ನಿಮ್ಮ ಸಂಸಾರವನ್ನೇ ಅರ್ಥವಿಲ್ಲದ ಸೇಡಿನಿಂದ ಬಲಿ ತೆಗೆದುಕೊಂಡಿರುವ ಇವನಿಗಾಗಿ ನೀವು ಅಳಬಾರದು'

ಆದರೆ ಅವಳಿಗೆ ದುಃಖ ತಡೆಯಲಾಗುತ್ತಿಲ್ಲ. ಸುರೇಂದ್ರ ಈಗ ಭಯ, ಗಾಬರಿಯಿಂದ 'ನಾವು ಇಲ್ಲಿ ಇರಬಾರದು. ಬನ್ನಿ ಬೇಗ ಹೋಗೋಣ. ಇಲ್ಲಿದ್ದರೆ ನಮಗೆ ಸಾವು ಗ್ಯಾರಂಟಿ.'

ಅವಳು ಭಯದಿಂದಲೇ 'ಸುರೇಂದ್ರ... ನನ್ನ ಪಾಲಿಗೆ ಈಗ ಉಳಿದಿರೋ ಕರುಳಿನ ಕುಡಿ ಅಂದರೆ ನನ್ನ ಮಗಳು ಮಲ್ಲಿಗೆ. ಅವಳನ್ನು ಕರೆದುಕೊಂಡು ಊರಿಗೆ...'

ಗಾಬರಿ, ಆತುರದಿಂದ 'ಏನು... ನೀವು ಏನು ಹೇಳ್ತಾ ಇದ್ದೀರ. ನಿಮ್ಮ ಗಂಡ ಮತ್ತು ನನ್ನ ಕಾವ್ಯಳನ್ನು ಮಾಂತ್ರಿಕ ಪ್ರಯೋಗದಿಂದ ಸಾಯಿಸಿದ್ದು ನಿಮ್ಮ ಮಗಳು ಮಲ್ಲಿಗೆ. ಈಗ ನಿಮ್ಮನ್ನು ಸಾಯಿಸಲು ಪ್ರಯತ್ನಿಸುತ್ತಿರುವುದು ಅವಳೇ ಅಂತ ಗೊತ್ತಿದೆ ತಾನೆ?'

ಅವಳು ಎದ್ದು ನಿಂತುಕೊಂಡು 'ಗೊತ್ತಿದೆ. ನನ್ನ ಮಗಳು ಮಲ್ಲಿಗೆ ನನ್ನ ಅಣ್ಣಯ್ಯನ ಕಾರಣದಿಂದ ಇಂಥ ಕೆಲಸ ಮಾಡಿದ್ದಾಳೆ.'

ಸುರೇಂದ್ರ ಗಾಬರಿಯಿಂದ 'ಈಗ ನಿಮ್ಮ ಪ್ರಾಣ ಸಹ ಅಪಾಯದಲ್ಲಿದೆ. ಅಂದ ಮೇಲೆ...'

ಅರುಂಧತಿ 'ಎಲ್ಲಾದರೂ ಅಡಗಿಕೊಂಡು ಗುಂಡಿನಿಂದ ತಪ್ಪಿಸಿಕೊಳ್ಳಬಹುದು. ಆದರೆ